**National**
**Kannada**
**13.03.2025 1935 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ನವದೆಹಲಿಯಲ್ಲಿಂದು ವಿಶ್ವ ಶ್ರವಣ, ದೃಶ್ಯ ಮತ್ತು ಮನರಂಜನಾ ಶೃಂಗಸಭೆ–ವೇವ್ಸ್ ಉದ್ಘಾಟಿಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್
2. ಸ್ಪೇಡೆಕ್ಸ್: ಇಸ್ರೋದಿಂದ ಎರಡು ಉಪಗ್ರಹಗಳ ಅನ್‌ಡಾಕಿಂಗ್ ಯಶಸ್ವಿ
3. ಕೊನೆಯ ಕ್ಷಣದ ತಾಂತ್ರಿಕ ಸಮಸ್ಯೆ: ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ನಿಗದಿತ ಹಾರಾಟ ಮುಂದೂಡಿದ ಸ್ಪೇಸ್‌ಎಕ್ಸ್
4. ಡಬ್ಲ್ಯೂಪಿಎಲ್ ಕ್ರಿಕೆಟ್: ಇಂದು ಮುಂಬೈ ಇಂಡಿಯನ್ಸ್– ಗುಜರಾತ್ ಜೈಂಟ್ಸ್ ಮುಖಾಮುಖಿ

******************

ಜಗತ್ತಿನಲ್ಲಿ ಶ್ರವಣ, ದೃಶ್ಯ ಮತ್ತು ಮನರಂಜನಾ ಕ್ಷೇತ್ರ ವೇಗವಾಗಿ ಬದಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕಂಟೆಂಟ್ ಕ್ರಿಯೇಟರ್‌ಗಳಿಗೆ ವೇದಿಕೆಯನ್ನು ಕಲ್ಪಿಸಿದ್ದಾರೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಮೊದಲ ಬಾರಿಗೆ ಆಯೋಜಿಸಿರುವ ವಿಶ್ವ ಶ್ರವಣ, ದೃಶ್ಯ ಮತ್ತು ಮನರಂಜನಾ ಶೃಂಗಸಭೆ–ವೇವ್ಸ್ ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧ್ವನಿ: ಅಶ್ವಿನಿ ವೈಷ್ಣವ್ 21 ಸೆಕೆಂಡ್ಸ್

ವಿವಿಧ ದೇಶಗಳ 100ಕ್ಕೂ ಹೆಚ್ಚು ರಾಯಭಾರಿಗಳು, ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಮತ್ತಿತರರು ಇದರಲ್ಲಿ ಭಾಗಿಯಾಗಿದ್ದಾರೆ.

ಈ ಕಾರ್ಯಕ್ರಮದ ಮೂಲಕ, ವೇಗವಾಗಿ ಬೆಳೆಯುತ್ತಿರುವ ಮಾಧ್ಯಮ ಮತ್ತು ಮನರಂಜನಾ ವಲಯಕ್ಕೆ ಏಕೀಕೃತ ಜಾಗತಿಕ ವೇದಿಕೆಯಾಗಿ ವೇವ್ಸ್‌ನ ಪರಿವರ್ತನಾ ಸಾಮರ್ಥ್ಯವನ್ನು ಎತ್ತಿ ತೋರಿಸುವುದು ಸರ್ಕಾರ ಗುರಿಯಾಗಿದೆ.

ವೇವ್ಸ್ ಶೃಂಗಸಭೆಯ ಮೊದಲ ಆವೃತ್ತಿಯನ್ನು ಮೇ 1 ರಿಂದ ಮೇ 4 ರವರೆಗೆ ಮುಂಬೈನಲ್ಲಿ ನಡೆಸಲು ನಿರ್ಧರಿಸಲಾಗಿದೆ.

******************

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ–ಇಸ್ರೋ, ಬಾಹ್ಯಾಕಾಶ ಡಾಕಿಂಗ್ ಪ್ರಯೋಗ–ಸ್ಪೇಡೆಕ್ಸ್ ಕಾರ್ಯಾಚರಣೆಯ ಭಾಗವಾಗಿರುವ ಎರಡು ಉಪಗ್ರಹಗಳ ಅನ್‌ಡಾಕಿಂಗ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಇದು ಭಾರತದ ಬಾಹ್ಯಾಕಾಶ ಪರಿಶೋಧನಾ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಸ್ಪೇಡೆಕ್ಸ್ ಕಾರ್ಯಾಚರಣೆಯ ಭಾಗವಾಗಿ ಅನ್‌ಡಾಕಿಂಗ್ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್, ಇಸ್ರೋ ಸಂಸ್ಥೆಯನ್ನು ಅಭಿನಂದಿಸಿದ್ದಾರೆ.

ಭಾರತೀಯ ಅಂತರಿಕ್ಷ ನಿಲ್ದಾಣ, ಚಂದ್ರಯಾನ–4, ಗಗನಯಾನ್ ಸೇರಿದಂತೆ ಮಹತ್ವಾಕಾಂಕ್ಷೆಯ ಭವಿಷ್ಯದ ಕಾರ್ಯಾಚರಣೆಗಳನ್ನು ಇದು ಸುಗಮಗೊಳಿಸಿದೆ ಎಂದು ಸಚಿವರು ಹೇಳಿದ್ದಾರೆ.

ಚೇಸರ್ SDX-01 ಮತ್ತು ಟಾರ್ಗೆಟ್ SDX-02 ಉಪಗ್ರಹಗಳು ತಮ್ಮ ವೇಗವನ್ನು ಕಡಿಮೆ ಮಾಡಿ, ಭೂಮಿಯ ಕೆಳಗಿನ ಕಕ್ಷೆಯಲ್ಲಿ ಪರಸ್ಪರ ಬಿಗಿಗೊಂಡು, ಇದೇ ವರ್ಷದ ಜನವರಿ 16ರಂದು ಇಸ್ರೋ ಡಾಕಿಂಗ್ ಪ್ರಯೋಗವನ್ನು ಸಾಧಿಸಿತು.

******************

ರಾಕೆಟ್‌ನ ಲಾಂಚ್‌ಪ್ಯಾಡ್‌ನಲ್ಲಿನ ಕೊನೆಯ ಕ್ಷಣದ ತಾಂತ್ರಿಕ ಸಮಸ್ಯೆಯಿಂದಾಗಿ ಸ್ಪೇಸ್‌ಎಕ್ಸ್, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ನಿಗದಿತ ಹಾರಾಟವನ್ನು ಮುಂದೂಡಿದೆ.

ಈ ಕಾರ್ಯಾಚರಣೆಯು ನಾಲ್ಕು ಗಗನಯಾತ್ರಿಗಳನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸುವ ಉದ್ದೇಶವನ್ನು ಹೊಂದಿತ್ತು. ಅಲ್ಲದೇ ಇದು ಬಾಹ್ಯಾಕಾಶದಿಂದ ಅಮೆರಿಕದ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರ ದೀರ್ಘಾವಧಿಯ ವಾಪಸಾತಿಗೆ ಅನುಕೂಲವಾಗಿತ್ತು.

******************

ವಿಶ್ವದ ಅತಿದೊಡ್ಡ ದೇಶೀಯ ಮೇಲ್ಛಾವಣಿ ಸೌರಶಕ್ತಿ ಉಪಕ್ರಮವಾದ 'ಪಿಎಂ ಸೂರ್ಯ ಘರ್' ಉಚಿತ ವಿದ್ಯುತ್ ಯೋಜನೆಯು 10 ಲಕ್ಷ ಅಳವಡಿಕೆಗಳೊಂದಿಗೆ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ.

ಕಳೆದ ವರ್ಷ ಫೆಬ್ರವರಿಯಲ್ಲಿ ಪ್ರಾರಂಭವಾದ ಈ ಯೋಜನೆಯು ದೇಶದ ಇಂಧನ ಕ್ಷೇತ್ರವನ್ನು ತ್ವರಿತವಾಗಿ ಮರುರೂಪಿಸುತ್ತಿದೆ. ಈ ಉಪಕ್ರಮದಡಿಯಲ್ಲಿ, ಆರು ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ 4 ಸಾವಿರದ 770 ಕೋಟಿ ರೂಪಾಯಿಗಳಿಗೂ ಹೆಚ್ಚು ಸಬ್ಸಿಡಿಗಳನ್ನು ವಿತರಿಸಲಾಗಿದೆ.

ದಮನ್ ಮತ್ತು ಡಿಯು ಹಾಗೂ ಚಂಡೀಗಢದ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಸೌರಶಕ್ತಿ ಅನುಷ್ಠಾನದಲ್ಲಿ ಶೇಖಡ 100 ರಷ್ಟು ಗುರಿ ಸಾಧಿಸಲಾಗಿದೆ. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್ ಮತ್ತು ತಮಿಳುನಾಡು ಮುಂತಾದ ರಾಜ್ಯಗಳು ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಮೇಲ್ಛಾವಣಿ ಸೌರಶಕ್ತಿ ವ್ಯವಸ್ಥೆಯು ವಿದ್ಯುತ್ ಬಿಲ್‌ಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಬಳಕೆದಾರರು, ತಮ್ಮ ಮೇಲ್ಛಾವಣಿ ಸೌರಶಕ್ತಿ ವ್ಯವಸ್ಥೆಗಳಿಂದ ಉತ್ಪಾದಿಸುವ ಹೆಚ್ಚುವರಿ ಶಕ್ತಿಯನ್ನು DISCOM ಗಳಿಗೆ ಮಾರಾಟ ಮಾಡುವ ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸಬಹುದಾಗಿದೆ.

******************

ಆಂಧ್ರಪ್ರದೇಶ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣ ಸೇರಿದಂತೆ ತೊಗರಿ ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ತೊಗರಿ ಖರೀದಿ ಹೆಚ್ಚಾಗಿದೆ.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಪ್ರಕಾರ, ಒಟ್ಟು 1.31 ಲಕ್ಷ ಮೆಟ್ರಿಕ್ ಟನ್ ತೊಗರಿ ಖರೀದಿಸಲಾಗಿದ್ದು, ಈ ರಾಜ್ಯಗಳಲ್ಲಿ ಸುಮಾರು 90 ಸಾವಿರ ರೈತರಿಗೆ ಪ್ರಯೋಜನವಾಗಿದೆ.

ಕನಿಷ್ಠ ಬೆಂಬಲ ಬೆಲೆಯಡಿ ತೊಗರಿ, ಉದ್ದು ಮತ್ತು ಮಸೂರ್ ಉತ್ಪಾದನೆಯ ಶೇಖಡ 100 ರಷ್ಟು ಖರೀದಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಇತರೆ ರಾಜ್ಯಗಳಲ್ಲಿ ತೊಗರಿ ಖರೀದಿ ಕೂಡ ಶೀಘ್ರದಲ್ಲೇ ಪ್ರಾರಂಭವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

******************

ಜೂನ್ 21 ರಂದು ಜಗತ್ತಿನಾದ್ಯಂತ ನಡೆಯಲಿರುವ 11ನೇ ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಕೇಂದ್ರ ಆಯುಷ್ ಸಚಿವ ಪ್ರತಾಪ್ ರಾವ್ ಜಾದವ್ ನವದೆಹಲಿಯಲ್ಲಿ ಇಂದು ಯೋಗ ಮಹೋತ್ಸವ–2025 ಅನ್ನು ಉದ್ಘಾಟಿಸಿದರು.

ಈ ಕಾರ್ಯಕ್ರಮಗಳ ಅಡಿಯಲ್ಲಿ 10 ಪಾಲುದಾರ ದೇಶಗಳೊಂದಿಗೆ 'ಯೋಗ ಬಂಧನ್–ಯೋಗ ವಿನಿಮಯ' ಕಾರ್ಯಕ್ರಮವನ್ನು ನಡೆಸಲಾಗುವುದು. ದೇಶದ 10 ಸಾವಿರ ಸ್ಥಳಗಳಲ್ಲಿ ಯೋಗ ಸಂಗಮ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಸಚಿವರು ತಿಳಿಸಿದರು.

ಇಂದು ಜಗತ್ತಿನಲ್ಲಿ 30 ಕೋಟಿ ಜನರು ಯೋಗಾಭ್ಯಾಸ ಮಾಡುತ್ತಿದ್ದು, ಯೋಗದಿಂದ ಜನರಿಗೆ ಅಪಾರ ಪ್ರಯೋಜನವಾಗಿದೆ ಎಂದು ಸಚಿವ ಪ್ರತಾಪ್ ರಾವ್ ಜಾದವ್ ಹೇಳಿದರು.

******************

ಗುಜರಾತ್‌ನ ಗಾಂಧಿನಗರ ಲೋಕಸಭಾ ಕ್ಷೇತ್ರದಲ್ಲಿ ಇಂದು 146 ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ವರ್ಚುವಲ್ ಆಗಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಉದ್ಘಾಟಿಸಿದರು ಮತ್ತು ಶಿಲಾನ್ಯಾಸ ಮಾಡಿದರು.

ಈ ಯೋಜನೆಗಳು ರೈಲ್ವೆ, ರಸ್ತೆ ಮಾರ್ಗಗಳು ಮತ್ತು ಆರೋಗ್ಯ ರಕ್ಷಣೆಗೆ ಸಂಬಂಧಿಸಿವೆ.

ಭಾರತವು ಈಗ ವಿಶ್ವದ ಎರಡನೇ ಅತಿ ಉದ್ದದ ರಸ್ತೆ ಜಾಲ ಮತ್ತು ಮೂರನೇ ಅತಿದೊಡ್ಡ ಮೆಟ್ರೋ ಜಾಲವನ್ನು ಹೊಂದಿದೆ ಎಂದು ಸಚಿವ ಅಮಿತ್ ಶಾ ಹೇಳಿದರು.

ರೈಲ್ವೆ, ರಸ್ತೆ ಮತ್ತು ಇಂಧನ ವಲಯಕ್ಕೆ ಸಂಬಂಧಿಸಿದ ಹಲವಾರು ಜನ–ಕೇಂದ್ರಿತ ಯೋಜನೆಗಳೊಂದಿಗೆ ಗುಜರಾತ್ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಅವರು ಹೇಳಿದರು.

ಇದೇ ವೇಳೆ, ಸನಂದ್ ಪ್ರದೇಶದಲ್ಲಿ ನೂತನವಾಗಿ 500 ಹಾಸಿಗೆಗಳ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿ ನಾಗರಿಕ ಆಸ್ಪತ್ರೆಯನ್ನು ಸ್ಥಾಪಿಸುವ ಸರ್ಕಾರದ ಯೋಜನೆಯನ್ನು ಸಚಿವ ಅಮಿತ್ ಶಾ ಘೋಷಿಸಿದರು.

******************

ಭಾರತವನ್ನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ದೂರದೃಷ್ಟಿಕೋನದೊಂದಿಗೆ ಯುವಜನರನ್ನು ಕಾರ್ಯತಂತ್ರದ ನೀತಿಗಳು ಮತ್ತು ಉಪಕ್ರಮಗಳ ಮೂಲಕ ಸಬಲೀಕರಣಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

ಕಾಶ್ಮೀರ ವಿಶ್ವವಿದ್ಯಾಲಯದ 'ವಿಕಸಿತ ಭಾರತ–ಯುವ ಸಂಪರ್ಕ' ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ವಿದ್ಯಾರ್ಥಿಗಳ ಶಕ್ತಿ, ಮಹತ್ವಾಕಾಂಕ್ಷೆ ಮತ್ತು ನಾವೀನ್ಯತೆಯು ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ರಾಷ್ಟ್ರದ ಯುವಕರ ಸಂಕಲ್ಪ ಮತ್ತು ಪ್ರತಿಭೆಯ ಮೂಲಕ ಅಭಿವೃದ್ಧಿ ಹೊಂದಿದ ಭಾರತದ ಕನಸು ನನಸಾಗಲಿದೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

******************

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು, ಡಿಜಿಟಲ್ ಕ್ರಿಯೇಟರ್‌ಗಳನ್ನು ದೇಶದ ಡಿಜಿಟಲ್ ರಾಯಭಾರಿಗಳು ಎಂದು ಕರೆದಿದ್ದಾರೆ.

ನವದೆಹಲಿಯಲ್ಲಿಂದು ನಡೆದ ಕಾರ್ಯಕ್ರಮವೊಂದನ್ನು ಉದ್ದೇಶಿಸಿ ಮಾತನಾಡಿದ ಅವರು, ಜವಾಬ್ದಾರಿಯುತ ವಿಷಯ, ನವೀನ ಕಥೆ ಹೇಳುವಿಕೆ, ಕೌಶಲ್ಯ ಅಭಿವೃದ್ಧಿ ಮತ್ತು ಭಾರತೀಯ ಸೃಜನಶೀಲತೆಯ ರಫ್ತು – ಸೃಜನಶೀಲ ಉದ್ಯಮದ ನಾಲ್ಕು ಪ್ರಮುಖ ಅಂಶಗಳಾಗಿವೆ ಎಂದು ತಿಳಿಸಿದರು.

ಸೃಜನಶೀಲ ವಲಯದಲ್ಲಿ ವಿಶಾಲ ಅವಕಾಶಗಳಿವೆ. ಈ ಉದ್ಯಮವು ಈಗಾಗಲೇ ಬಹು-ಶತಕೋಟಿ ಡಾಲರ್ ವಲಯವಾಗಿದ್ದು, ದೇಶಾದ್ಯಂತ ಹೆಚ್ಚಿನ ಸಂಖ್ಯೆಯ ಜನರನ್ನು ತೊಡಗಿಸಿಕೊಂಡಿದೆ ಎಂದು ಸಚಿವ ಪಿಯೂಷ್ ಗೋಯಲ್ ಹೇಳಿದರು.

******************

ಇಟಲಿಯಲ್ಲಿ ನಡೆಯುತ್ತಿರುವ ವಿಶೇಷ ಒಲಿಂಪಿಕ್ಸ್ ವಿಶ್ವ ಚಳಿಗಾಲದ ಕ್ರೀಡಾಕೂಟದ ಎರಡನೇ ದಿನದಂದು ಭಾರತ ಎರಡು ಚಿನ್ನ, ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕಗಳನ್ನು ಗೆದ್ದಿದೆ. ಈ ಮೂಲಕ ಒಟ್ಟು ಪದಕಗಳ ಸಂಖ್ಯೆ ಒಂಬತ್ತಕ್ಕೆ ಏರಿಕೆಯಾಗಿದೆ.

ಸ್ನೋಬೋರ್ಡಿಂಗ್‌ನಲ್ಲಿ, ನೊವೀಸ್ ಸ್ಲಾಲೋಮ್ ಫೈನಲ್‌ನಲ್ಲಿ ಭಾರತಿ ಚಿನ್ನ ಗೆದ್ದಿದ್ದು, ಹರ್ಷಿತಾ ಠಾಕೂರ್ ಕಂಚಿನ ಪದಕ ಗೆದ್ದರು.

******************

ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ, ಮುಂಬೈ ಇಂಡಿಯನ್ಸ್ ಇಂದು ಮುಂಬೈನ ಬ್ರಬೋರ್ನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡದ ವಿರುದ್ಧ ಸೆಣಸಾಟ ನಡೆಸುತ್ತಿದೆ.

ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ತಂಡ, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

ಡೆಲ್ಲಿ ಕ್ಯಾಪಿಟಲ್ಸ್ ಈಗಾಗಲೇ 10 ಅಂಕಗಳೊಂದಿಗೆ ಒಟ್ಟಾರೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಟೂರ್ನಿಯ ಫೈನಲ್ ತಲುಪಿದೆ. ಮುಂಬೈ ಎರಡನೇ ಸ್ಥಾನದಲ್ಲಿದ್ದರೆ, ಗುಜರಾತ್ ಜೈಂಟ್ಸ್ ಮೂರನೇ ಸ್ಥಾನ ಪಡೆದುಕೊಂಡಿದ್ದು, ಉಳಿದ ಅಂತಿಮ ಸ್ಥಾನಕ್ಕಾಗಿ ಎರಡೂ ತಂಡಗಳ ನಡುವೆ ಹಣಾಹಣಿ ಏರ್ಪಟ್ಟಿದೆ.

******************

ಆಸ್ಟ್ರೇಲಿಯಾದ ಬ್ರಿಸ್‌ಬೇನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಸ್ಕ್ವಾಷ್ 2025 ಪಂದ್ಯಾವಳಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು ಸ್ಕಾಟ್‌ಲ್ಯಾಂಡ್ ಗ್ರೆಗ್ ಲೋಬ್ಬನ್ ವಿರುದ್ಧ ಭಾರತದ ಸೇಂಥಿಲ್ ಕುಮಾರ್ ಪರಾಭವಗೊಂಡಿದ್ದಾರೆ.

ಈ ಮೂಲಕ ಅವರು, ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೇಂಥಿಲ್ ವಿರುದ್ಧ 8–11, 11–7, 12–10 ಮತ್ತು 11–9 ಸೆಟ್‌ಗಳಿಂದ ಗ್ರೆಗ್ ಲೋಬ್ಬನ್ ವಿಜೇತರಾದರು.

******************

ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್‌ನ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ–ಕ್ವಾರ್ಟರ್‌ಫೈನಲ್ಸ್ ಪಂದ್ಯದಲ್ಲಿಂದು ಜಪಾನ್‌ನ ಅಕಾನೆ ಯಮಗುಚಿ ವಿರುದ್ಧ ಭಾರತದ ಮಳವಿಕಾ ಬಾನ್ಸೋಡ್ ಪರಾಭವಗೊಂಡಿದ್ದಾರೆ.

ಮಳವಿಕಾ ಬಾನ್ಸೋಡ್ ವಿರುದ್ಧ 21–16, 21–13 ಸೆಟ್‌ಗಳಿಂದ ಯಮಗುಚಿ ವಿಜೇತರಾಗಿದ್ದಾರೆ.

******************

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಷೇರು ಸಂವೇದಿ ಸೂಚ್ಯಂಕ–ಸೆನ್ಸೆಕ್ಸ್ 201 ಅಂಕಗಳು ಇಳಿಕೆಯಾಗಿದ್ದು, ದಿನದ ಅಂತ್ಯಕ್ಕೆ 73 ಸಾವಿರದ 829 ಅಂಕಗಳು ದಾಖಲಾಗಿದೆ.

ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ–ನಿಫ್ಟಿ 73 ಅಂಕಗಳು ಇಳಿಕೆ ಕಂಡಿದ್ದು, ದಿನದ ಅಂತ್ಯಕ್ಕೆ 22 ಸಾವಿರದ 397 ಅಂಕಗಳು ದಾಖಲಾಗಿದೆ.

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ 87 ರೂಪಾಯಿಯಷ್ಟಾಗಿದೆ.

*********ಮುಕ್ತಾಯ*********